ಶ್ರೀ ವಿ. ಸೋಮಣ್ಣ : ಅಧ್ಯಕ್ಷರೇ ವರ್ಷಕ್ಕೆ 15 ಠಾಣೆ ಪ್ರಾರಂಭಿಸಲು ಆಯವ್ಯಯದಲ್ಲಿ ನಮಗೆ ಮಂಜೂರಾತಿ ಇದೆ. ಇವುಗಳನ್ನು ಮಾಡಲು ಅರ್ಥಮಂತ್ರಿಗಳಲ್ಲಿಮನವಿಯನ್ನೂ ಸಲ್ಲಿಸಿದ್ದೇವೆ. ಆದ್ದರಿಂದ 1997-98ರಲ್ಲಿ ಅಂಕೋಲಾಕ್ಕೆ ಅಗ್ನಿಶಾಮಕ ಠಾಣೆ ಕೊಡಲು ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಹಾಗೆಯೇ ಹುಬ್ಬಳ್ಳಿಯು ಅಗ್ನಿಶಾಮಕ ಠಾಣೆಗಾಗಿ ಜಾಗವನ್ನು ನಾನು ನೋಡಿದ್ದೇನೆ. ಒಂದು ಠಾಣೆ ತೆರೆಯಬೇಕಾದರೆ ಕನಿಷ್ಠ ಎರಡು ಎಕರೆ ಜಾಗ ಬೇಕಾಗುತ್ತದೆ. ನಾನು ಎರಡು ಸಾರಿ ಹೋದಾಗಲೂ ಮಾನ್ಯ ಸದಸ್ಯರು ನನಗೆ ಸಿಗಲಿಲ್ಲ. ಹುಬ್ಬಳ್ಳಿ ಒಳಗಡೆ ಅವರು ಜಾಗ ಕೊಟ್ಟರೆ ನಾವು ಅಲ್ಲಿ ತೆರೆಯುತ್ತೇನೆ. ನೀವು ಬಂದು ನನ್ನನ್ನು ನೋಡಿ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ಮುಗಿಯಿತು.

3) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಆರ್. ವಿ. ದೇಶಪಾಂಡೆ : (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) ಅಧ್ಯಕ್ಷರೇ, 17ನೇ ಪಟ್ಟಿಯಲ್ಲಿನ ಈ ದಿನದ ಲಿಖಿತ ಮೂಲಕ ಉತ್ತರಿಸುವ 28 ಪ್ರಶ್ನೆಗಳ ಪೈಕಿ 21 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಪಡಿತರ ಪದ್ಧತಿಯಲ್ಲಿ ಕೇಂದ್ರದಿಂದ ಹೆಚ್ಚಿನ ಆಹಾರ ಧಾನ್ಯಗಳ ಕೋಟಾವನ್ನು ಪಡೆಯುವುದು

1482 (2160)-ಶ್ರೀ ಅಲ್ಲೂರಿ ವೀರಭದ್ರಪ್ಪ (ಕುರುಗೋಡು) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಸಾರ್ವಜನಿಕ ವಿತರಣೆ ವ್ಯವಸ್ತೆ ಮೂಲಕ ಸಾರ್ವಜನಿಕರಿಗೆ ವಿತರಿಸಲಾಗುವ ಅಕ್ಕಿ ಮತ್ತು ಸಕ್ಕರೆಯ ತಿಂಗಳ ಕೋಟಾನನ್ನು ಪ್ರತೀ ಕಾರ್ಡಿಗೆ ತಿಂಗಳಿಗೆ 1 ಕೆ.ಜಿ. ಯಿಂದ 2 1/2 ಕೆ.ಜಿ.ಗೆ ಇಳಿಸಿ ಸುತ್ತೋಲೆಯೊಂದನ್ನು ಸರ್ಕಾರವು ಹೊರಡಿಸಿದೆಯೇ?

ಆ) ಹಾಗಿದ್ದಲ್ಲಿ ಕಾರಣಗಳೇನು?

ಇ) ಕೇಂದ್ರದಿಂದ ಹೆಚ್ಚುವರಿ ಕೋಟಾವನ್ನು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?